**ದಿ: 05-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಬಿ.ಎಸ್. ವಕೀಲರಿಂದ: -**

1. ನಾನು ಶಾಲೆ ಓದಿಲ್ಲ ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೂ ವಿಷಯಗಳು ಬರೆದಿದ್ದಾರೆ ಎಂದು ನನಗೆ ಗೊತ್ತಿದೆ. ನಿಮ್ಮ ವಾದ ಪತ್ರದ ಪ್ಯಾರಾ ನಂ 2 ನಲ್ಲಿ ದಾವಾ ಆಸ್ತಿಗೆ ವಾದಿಯೇ ಜಂಟಿ ಮಾಲೀಕಳು ಮತ್ತು ಕಬ್ಜಾದಾರಳು ಎಂದು ಬರೆಸಿದ್ದೀರಾ ಅವರ ಜಂಟಿ ಮಾಲೀಕರವರ ಹೆಸರು ಏನಿದೆ ಎಂದು ಸುಚಿಸಿದ್ದು ಸಾಕ್ಷಿಯು ನಾನೊಬ್ಬಳೇ ಮಾಲೀಕಳಾಗಿದ್ದೇನೆ ಎನ್ನುತ್ತಾರೆ. ವಾದ ಪತ್ರದಲ್ಲಿ ನಾನೊಬ್ಬಳೆ ದಾವಾ ಆಸ್ತಿಗೆ ಮಾಲೀಕಳು ಎಂದು ಹೇಳಿ ಬರೆಸಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ. ಜಂಟಿ ಮಾಲೀಕರ ಒಪ್ಪಿಗೆ ಪಡೆದುಕೊಂಡು ದಾವಾ ಸಲ್ಲಿಸಿದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ನಾನೊಬ್ಬಳೆ ಮಾಲೀಕಳು ಎನ್ನುತ್ತಾರೆ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂಬರ್ 2 ರಲ್ಲಿ ದಾವಾ ಆಸ್ತಿಗೆ ನಾನೇ ಮಾಲೀಕಳು ಮತ್ತು ಕಬ್ಜಾದಾರಳು ಇರುತ್ತೇನೆಂದು ವಾದ ಪತ್ರದ ಪ್ಯಾರಾ ನಂಬರ್ 2 ರಲ್ಲಿ ನಮೂದು ಮಾಡಿರುವ ಅಂಶಗಳಿಗೆ ವಿರುದ್ದವಾಗಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ನಾನೊಬ್ಬಳೆ ಮಾಲೀಕಳು ಎಂದು ಹೇಳುತ್ತಾರೆ.

2. ದಾವಾ ಆಸ್ತಿಯ ವಿಸ್ತೀರ್ಣ 3 ವರೆ ಎಕರೆ ಇರುತ್ತದೆ. ದಾವಾ ಆಸ್ತಿಯ ಪಹಣಿಯಲ್ಲಿ ನನ್ನ ಹೆಸರಿಗೆ 3 ವರೆ ಎಕರೆ ಇದೆ ಎಂದು ಬರೆದಿದ್ದಾರೆ. ನಿಮ್ಮ ವಾದ ಪತ್ರ ಮತ್ತು ಸಾಕ್ಷಿ ಪ್ರಮಾಣಪತ್ರದ ಪ್ಯಾರಾ ನಂಬರ್ 2 ನಲ್ಲಿ ವಿಸ್ತೀರ್ಣ 03 ಎಕರೆ 14 ಗುಂಟೆ ಎಂದು ಬರೆಸಿದ್ದೀರಾ ಮತ್ತು ಪ್ಯಾರಾ ನಂಬರ್ 3 ಇದರ ಕೊನೆಯ

2ನೇ ಸಾಲಿನಲ್ಲಿ ವಿಸ್ತೀರ್ಣ 03 ಎಕರೆ 17 ಗುಂಟೆ ಎಂದು ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿಯು 03 ವರೆ ಎಕರೆ ಇದೆ ಆ ರೀತಿ ಹೇಳಿ ಬರೆಸಿಲ್ಲ ಎನ್ನುತ್ತಾರೆ. ನಿಮ್ಮ ವಾದ ಪತ್ರದಲ್ಲಿ ದಾವಾ ಆಸ್ತಿ ನಿಮಗೆ ಹೇಗೆ ಬಂದಿರುತ್ತದೆ ಎಂದು ನೀವು ಹೇಳಿ ಬರೆಸಿಲ್ಲ ಎಂದರೆ ಸರಿ. ನಿಮ್ಮ ಹೆಸರಿಗೆ ದಾವಾ ಆಸ್ತಿ ಹೇಗೆ ಆಗಿರುತ್ತದೆ ಎಂದು ನೀವು ನ್ಯಾಯಾಲಯಕ್ಕೆ ದಾಖಲಾತಿಯನ್ನು ಕೊಟ್ಟಿಲ್ಲ ಎಂದರೆ ಸರಿ. ಸುಮಾರು 50 ವರ್ಷದಿಂದ ನನ್ನ ಕಬ್ಜಾದಲ್ಲಿರುವ ಪಟ್ಟಿಯನ್ನು ನಾನು ಅಷ್ಟೇ ವಿಸ್ತೀರ್ಣದಲ್ಲಿ ಸಾಗುವಳಿ ಮಾಡುತ್ತಿದ್ದೇನೆ. ಸರ್ವೆ ನಂಬರ್ 6 ಇದರ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 6 ರಲ್ಲಿ ಯಾರ ಯಾರಿಗೆ ಎಷ್ಟು ಎಷ್ಟು ಎಕರೆ ಜಮೀನು ಇದೆ ಎಂದರೆ ಸಾಕ್ಷಿಯು ರಂಗಣ್ಣ ಎನ್ನುವವರಿಗೆ 3-00 ಎಕರೆ ಇರುತ್ತದೆ, ಸಗರಣ್ಣ ಇವರಿಗೆ 6-00 ಎಕರೆ ಇರುತ್ತದೆ, ಬಸಲಿಂಗಮ್ಮ ಇವರಿಗೆ 2-00 ಎಕರೆ ಇರುತ್ತದೆ, ಹಂಪಮ್ಮ ಇವರಿಗೆ 6-00 ಎಕರೆ ಇರುತ್ತದೆ, ಉತ್ತರ ದಿಕ್ಕಿಗೆ ಪ್ರತಿವಾದಿಯ 3 ವರೆ ಎಕರೆ ಇದೆ. ನನಗೆ 3 ವರೆ ಎಕರೆ ಜಮೀನು ಇದೆ. ಸರ್ವೆ ನಂಬರ್ 6 ರಲ್ಲಿ ಇಂತಿಂತವರ ಜಮೀನು ಇಷ್ಟು ವಿಸ್ತೀರ್ಣ ಇರುತ್ತದೆ ಎಂದು ನಾನು ವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ನಿಮ್ಮ ವಾದ ಪತ್ರದಲ್ಲಿ ನೀವು ಹೇಳಿರುವ ಹೆಸರುಗಳಿಗೂ ಮತ್ತು ವಿಸ್ತೀರ್ಣಕ್ಕೂ ಮತ್ತು ನೀವು ಪಾಟೀಸವಾಲಿನಲ್ಲಿ ಹೇಳಿರುವ ಹೆಸರುಗಳಿಗೂ ಮತ್ತು ವಿಸ್ತೀರ್ಣಕ್ಕೂ ವ್ಯತ್ಯಯಾಸ ಇದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎನ್ನುತ್ತಾರೆ.

3. ವಾದ ಪತ್ರದ ಮತ್ತು ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂಬರ್ 4 ರಲ್ಲಿ ಉತ್ತರ ದಿಕ್ಕಿಗೆ ಪ್ರತಿವಾದಿಗೆ ಸರ್ವೆ ನಂಬರ್ 6/*/* ರಲ್ಲಿ ವಿಸ್ತೀರ್ಣ 03 ಎಕರೆ 14 ಗುಂಟೆ ಮತ್ತು 03 ಎಕರೆ 13 ಗುಂಟೆ ಜಮೀನು ಇರುತ್ತದೆ ಎಂದು ಹೇಳಿ ಬರೆಸಿದ್ದೀರಿ ಎಂದರೆ ಸಾಕ್ಷಿಯು ಒಂದೇ ಪಟ್ಟಿ ಇದೆ ಎಂದು ಹೇಳಿ ಬರೆಸಿದ್ದೇನೆ ಎನ್ನುತ್ತಾರೆ. ಸರ್ವೆ ಮಾಡಲು ಅರ್ಜಿಯನ್ನು ನಾನೇ 3 ವರ್ಷದ ಹಿಂದೆ ಕೊಟ್ಟಿರುತ್ತೇನೆ. ಸರ್ವೆ ಇಲಾಖೆಯವರು ಬಂದು ಅಳತೆಯನ್ನು ಮಾಡಿರುತ್ತಾರೆ. ಸರ್ವೆ ಮಾಡಿದವರು 1-00 ಎಕರೆ ಹೊಲ ಪ್ರತಿವಾದಿಗೆ ಹೋಗಿರುತ್ತದೆ ಎಂದು ಹೇಳಿರುರತ್ತಾರೆ. ನಿ ಪಿ 14 ಸರ್ವೆ ದಾಖಲೆಯ ಪ್ರಕಾರ ಸರ್ವೆ ಮಾಡುವ ಕಾಲಕ್ಕೆ ಪ್ರತಿವಾದಿ ಹಾಜರು ಇರಲಿಲ್ಲ ಮತ್ತು ಸರ್ವೆ ನಂಬರ್ 6 ರ ಉಳಿದ ಎಲ್ಲಾ ಹಿಸ್ಸೇದಾರರು ಹಾಜರು ಇರುತ್ತಾರೆ ಸರ್ವೆಯರಿಗೆ ಉಳಿದವರ ಹೊಲ ಸಾಗುವಳಿ ಅಳತೆ ಮಾಡುವುದು ಬೇಡ, ನನ್ನ ಸಾಗುವಳಿ ವಿಸ್ತೀರ್ಣದಂತೆ ಅಳತೆ ಮಾಡಲು ನೀವು ಹೇಳಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸರ್ವೆ ನಂಬರ್ 6 ರಲ್ಲಿ ಒಟ್ಟು ವಿಸ್ತೀರ್ಣ 20 ಎಕರೆ 13 ಗುಂಟೆ ಇರುತ್ತದೆ ಎಂದರೆ ಸರಿ. ಸರ್ವೆ ನಂಬರ್ 6 ರಲ್ಲಿ ಉಳಿದ ಹಿಸ್ಸೆದಾರರ ಹೊಲಗಳು ಅಳತೆ ಮಾಡದೇ ಅವರ ಹೊಲದ ಅಳತೆ ಎಷ್ಟಿದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಪ್ರತಿವಾದಿಗೆ ನನ್ನ ಹೊಲ ಹೋಗಿರುತ್ತದೆ ಎಂದು ಹೇಳಿರುತ್ತಾರೆ. ನಿ ಪಿ 14 ರಲ್ಲಿ ನಿಮ್ಮ ಹೊಲದಲ್ಲಿ ಪ್ರತಿವಾದಿ 1-00 ಎಕರೆ ಹೊಲದಲ್ಲಿ ಅತಿಕ್ರಮವಾಗಿ ಕಬ್ಜಾದ ಹೊಂದಿರುವುದಾಗಿ ಎಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ನಾನು ಹೇಳಿರುತ್ತೇನೆ ಎನ್ನುತ್ತಾರೆ. ಪ್ರತಿವಾದಿ ದಾವಾ ಆಸ್ತಿಯ ಉತ್ತರ ದಿಕ್ಕಿಗೆ 1-00 ಎಕರೆ ಹೊಲ ಅತಿಕ್ರಮಣ ಮಾಡಿದ್ದಾರೆಂದು ನಾನು ಹೇಳಿದ್ದೇನೆ ವಾದ

ಪತ್ರದಲ್ಲಿ ಅದನ್ನು ಬರೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಗೆ ದಾವಾ ಆಸ್ತಿಯ ಉತ್ತರ ದಿಕ್ಕಿಗೆ ನಿಖರವಾಗಿ ಎಷ್ಟು ವಿಸ್ತೀರ್ಣ ಇರುತ್ತದೆ ಎಂದರೆ ಸಾಕ್ಷಿಯು 3-20 ಎಕರೆ ಇರುತ್ತದೆ ಎಂದು ಹೇಳುತ್ತಾರೆ. ಪ್ರತಿವಾದಿಯ ಜಮೀನು ಅಳತೆ ಮಾಡಲಾರದೆ ಅವರ ಹೊಲ ಎಷ್ಟು ವಿಸ್ತೀರ್ಣದಲ್ಲಿದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ್ 6, ಇದರ ಒಟ್ಟು ವಿಸ್ತೀರ್ಣ 20 ಎಕರೆ 13 ಗುಂಟೆ ಇದ್ದು, ಸರ್ವೆ ವರದಿಯಲ್ಲಿ ನಿಮ್ಮ ಹೊಲ ಯಾರು ಎಷ್ಟು ವಿಸ್ತೀರ್ಣ ದ ಹೊಲವನ್ನು ಅತಿಕ್ರಮಣ ಮಾಡಿದ್ದಾರೆ ಎಂದು ನಿಖರವಾಗಿ ಬರೆದಿಲ್ಲ ಎಂದರೆ ಸಾಕ್ಷಿಯು ಸರ್ವೆಯರ್ ನನಗೆ ಹೇಳಿದ್ದಾರೆ ಎನ್ನುತ್ತಾರೆ. ಸರ್ವೆಯರ್ ನನಗೆ ಹೇಳಿದ್ದಾರೆ ಅವರ ಪ್ರಕಾರ ನಾನು ಈ ದಾವೆಯನ್ನು ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

4. ನಿಮ್ಮ ವಾದ ಪತ್ರದಲ್ಲಿ ದಾವಾ ಆಸ್ತಿಯನ್ನು ಯಾವಾಗ ಒತ್ತುವರಿ ಮಾಡಿದ್ದಾರೆ ಎಂದು ಹೇಳಿ ಬರೆಸಿಲ್ಲ ಎಂದರೆ ಸಾಕ್ಷಿಯು ಬಹಳ ದಿವಸಗಳ ಹಿಂದೆ ಎಂದು ನಾನು ಅವರಿಗೆ ಹೇಳಿದ್ದೆ ಅವರು ಬರೆದಿಲ್ಲ ಎನ್ನುತ್ತಾರೆ. ಸುಮಾರು 50 ವರ್ಷದಿಂದ ಅವರು ಒತ್ತು ವರಿ ಮಾಡಿದ್ದು ನ್ಯಾಯ ಇದ್ದು ಅವರು ಬಿಡುವುದಿಲ್ಲ ಎಂದು ಹೇಳುತ್ತಾರೆ. ನನ್ನ ಹೊಲ ಕಡಿಮೆ ಇದ್ದು, 3 ವರ್ಷದ ಹಿಂದೆ ಸರ್ವೆ ಅಳತೆ ಮಾಡಿಸಿದ್ದು ಅವರು ಹೊಲ ಬಿಡುವುದಿಲ್ಲ ಎಂದು ಹೇಳಿದ್ದೀರಿಂದ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ಸುಮಾರು 50 ವರ್ಷದಿಂದ ನ್ಯಾಯ ನಡೆದಿದೆ ಅವರು ಜಮೀನು ಬಿಡುವುದಿಲ್ಲ ಎಂದು ಹೇಳಿರುತ್ತಾರೆ ಎನ್ನುವ ವಿಷಯ ನಾನು ಅವರಿಗೆ

ಹೇಳಿದ್ದೆ ಅವರು ಬರೆದಿಲ್ಲ ಎನ್ನುತ್ತಾರೆ. ಪ್ರತಿವಾದಿ ದಾವಾ ಜಮೀನಿನ ಉತ್ತರ ದಿಕ್ಕಿಗೆ 1-00 ಎಕರೆ ಜಮೀನು ಒತ್ತುವರಿ ಮಾಡಿದ್ದಾರೆಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗೆ ಅವರ ಜಮೀನು ಅವರ ಮಾವ ಕಮಲ್ಯಾ ತಂದೆ ಹಜರಿ ಇವರ ಕಡೆಯಿಂದ ಬಂದಿರುತ್ತದೆ ಎಂದರೆ ಸರಿ. ಸದರಿ ಕಮಲ್ಯಾ ತಂದೆ ಹಜರಿ ಇವರು ಅವರ ಆಸ್ತಿಯನ್ನು ಸುಶೀಲಮ್ಮ ಎನ್ನುವವರ ಕಡೆಯಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಕಮಲ್ಯಾ ಇವರು 03 ಎಕರೆ 13 ಗುಂಟೆ ಮತ್ತು ಇನ್ನೊಂದು ಪಟ್ಟಿ 03 ಎಕರೆ 14 ಗುಂಟೆ ಒಟ್ಟು 06 ಎಕರೆ 27 ಗುಂಟೆ ಜಮೀನು ಖರೀದಿ ಮಾಡಿದ್ದಾನೆಂದರೆ ಸರಿ. ಸುಶೀಲಮ್ಮ ಇವರು 03 ಎಕರೆ 14 ಗುಂಟೆ ಪಟ್ಟಿಯನ್ನು ಕಮಲ್ಯಾ ಇವರಿಗೆ ಮಾರಾಟ ಮಾಡುವಾಗ ನೀವು ಆ ಜಮೀನು ನನಗೆ ಮಾರಾಟ ಮಾಡಬೇಕೆಂದು ನೀವು ನ್ಯಾಯಾ ಮಾಡಿದ್ದೀರಿ ಎಂದರೆ ಸುಳ್ಳು. ಇದೇ ವಿಷಯವಾಗಿ ನಿಮಗೂ ಮತ್ತು ಪ್ರತಿವಾದಿಗೂ ವೈಮನಸ್ಸು ಇದೆ ಎಂದರೆ ಸರಿಯಲ್ಲ. ಇದೇ ವಿಷಯವಾಗಿ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಮತ್ತು ನಿಮ್ಮ ವಾದ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸಂಪೂರ್ಣ ಸುಳ್ಳಾಗಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ